ಇನ್ನೂರು ಮುನ್ನೂರು ರೂಪಾಯಿಗಳಿಗೆಲ್ಲ ಸಿಕ್ಕುತ್ತಿದ್ದ ಕಾರಣ ಮಕ್ಕಳ ಕೈಗಳಲ್ಲೂ ವಾಚುಗಳು ರಾರಾಜಿಸತೊಡಗಿದವು.

ಇದೀಗ ಕಾಲ ಬದಲಾಗಿದೆ. ಇಂದಿನ ವಾಚುಗಳು ಬರೀ ಸಮಯವಷ್ಟೇ ಹೇಳುವುದಿಲ್ಲ. ವಾಚು ಕಟ್ಟಿಕೊಂಡವನ ಸಾಮಾಜಿಕ ಸ್ಥಾನಮಾನ, ಫ್ಯಾಷನ್‌ನ ಅಭಿರುಚಿ ಎಲ್ಲವನ್ನೂ ಸಾರಿ ಹೇಳುತ್ತದೆ. ಮೊಬೈಲ್‌ಗಳು ಸಮಯವನ್ನು ತೋರಿಸುತ್ತವಾದರೂ ಕೈಯಲ್ಲೊಂದು ಫ್ಯಾಷನಬಲ್ ವಾಚ್ ಇದ್ದರೆ ಕೈಗಳ ಅಂದವೇ ಬೇರೆ ಎಂಬಂತೆ ವಾಚುಗಳು ವಿನ್ಯಾಸದಲ್ಲಿ, ಆಕಾರದಲ್ಲಿ, ಬಣ್ಣಗಳಲ್ಲಿ ಲಭ್ಯವಾಗುತ್ತಿವೆ. ಚಿನ್ನದ ಫ್ರೇಮ್, ಚಿನ್ನದ ಚೈನ್, ಪ್ಲಾಟಿನಂ ಅಂಚಿನ ಚಂದದ ವಾಚು, ಪ್ಲಾಸ್ಟಿಕ್‌ನಿಂದ ವಿನ್ಯಾಸಮಾಡಿದ ಬಣ್ಣಬಣ್ಣದ ವಾಚು, ಮಕ್ಕಳಿಗೆ, ದೊಡ್ಡವರಿಗೆ ಹೆಣ್ಣುಮಕ್ಕಳಿಗೆ, ಹರೆಯದ ಅಜ್ಜ ಅಜ್ಜಿಯರಿಗೆ ಬೇರೆ ಹೀಗೆ. ಅದರಲ್ಲೂ ಸಮಾರಂಭಗಳಿಗೆ, ಕಚೇರಿಗೆ, ಜೀನ್ಸ್ ಹಾಕಿದಾಗ, ಸೀರೆ ಉಟ್ಟಾಗ, ಸೂಟ್ ಹಾಕಿದಾಗ.. ಹೀಗೆ ಬೇರೆ ಬೇರೆ ರೀತಿಯ ವಾಚುಗಳು ಕೈಗಳನ್ನು ಅಲಂಕರಿಸುತ್ತಿವೆ. ಮೊಬೈಲ್ ಜಮಾನವಾದರೂ ವಾಚುಗಳು ಆಯ್ಕೆಯಲ್ಲಿ ಪೈಪೋಟಿ ನಡೆಸುತ್ತಿವೆ. ಫ್ಯಾಷನ್‌ಪ್ರಿಯರ ಮನಗೆಲ್ಲುತ್ತಿವೆ.

ವಾಚ್‌ಗಾಗಿಯೇ ಹತ್ತಾರು ಕಂಪೆನಿಗಳು ಹುಟ್ಟಿಕೊಂಡಿವೆ. 100 ರೂಪಾಯಿಗಳಿಂದ ಹಿಡಿದು ದುಬಾರಿ 10 ಲಕ್ಷದವರೆಗಿನ ವಾಚುಗಳು ಇದೀಗ ಲಭ್ಯ. ಆನ್‌ಲೈನ್‌ನಲ್ಲೂ ಸಿಗುತ್ತವೆ ತರಾವರಿ ವಾಚುಗಳು. ಅಲ್ಲದೆ ಈಗ ಹೆಣ್ಣು ಮಕ್ಕಳ ವಾಚು, ಗಂಡಸರದ್ದು ಎಂಬ ವ್ಯತ್ಯಾಸವಿಲ್ಲ. ದೊಡ್ಡ ದೊಡ್ಡ ಡಯಲ್‌ನ ವಾಚ್ ಹದಿ ಹುಡುಗರಿಗೆ ಅಚ್ಚುಮೆಚ್ಚು ಎನಿಸಿದರೆ ಸಣ್ಣ ಡಯಲ್‌ನ ರೋಲ್ಡ್‌ಗೋಲ್ಡ್ ಚೈನಿನ ವಾಚು ಕಾಲೇಜು ಹುಡುಗಿಯರು ಇಷ್ಟಪಡುತ್ತಾರೆ. 'ಬೋಲ್ಡ್ ಲುಕ್ ಕೊಡಲು ಬೋಲ್ಡ್ ವಾಚುಗಳೇ ಬೇಕು' ಎನ್ನುತ್ತಾರೆ ಕಾಲೇಜು ಯುವತಿಯರು.



## ಹತ್ತಾರು ವೈವಿಧ್ಯ

ಇದಕ್ಕಾಗಿಯೇ ಟೈಟಾನ್, ಟೈಮೆಕ್ಸ್, ಫಾಸ್ಟ್ರ್ಯಾಕ್ , ಸಿಟಿಜನ್, ಸೊನಾಟ, ಒಮೆಗಾ, ಕ್ಯಾಸಿನೊ ಮುಂತಾದ ಬ್ರ್ಯಾಂಡಿನ ವಾಚುಗಳು ಫ್ಯಾಷನ್‌ಪ್ರಿಯರ ಮನತಣಿಸುತ್ತಿವೆ. ಇದರ ಜತೆಗೆ ಸ್ಪೋರ್ಟ್ಸ್ ವಾಚ್, ಡಿಜಿಟಲ್‌ವಾಚ್, ಟೈಮರ್ ವಾಚ್ (ವಾಕಿಂಗ್, ಈಜು, ವ್ಯಾಯಾಮ,ಕ್ರೀಡೆಗೆ ಹೋಗುವಾಗ ಬಳಸುವಂಥದ್ದು) ವಾಟರ್ ಪ್ರೂಫ್ ವಾಚ್, ರೇಡಿಯಂ ವಾಚ್, ಕಾಕ್‌ಟೈಲ್ ವಾಚ್, ಬ್ರೇಸ್‌ಲೆಟ್‌ನಂತೆ ಕಾಣುವ ವಾಚ್, ಬಳೆಯನ್ನೇ ಹೋಲುವ ವಾಚ್‌ಗಳು ಲಭ್ಯ. ಆಕಾರ, ಗಾತ್ರಗಳಲ್ಲೂ ಅಷ್ಟೆ. ತ್ರಿಕೋನ, ವೃತ್ತಾಕಾರ, ಓವಲ್ ಶೇಪ್, ಚೌಕ, ಆಯತಾಕಾರಗಳ ವಾಚುಗಳು ಫ್ಯಾಷನ್‌ನೊಂದಿಗೆ ತಳುಕು ಹಾಕಿಕೊಂಡಿವೆ.

ಚಿನ್ನದ ಫ್ರೇಮ್ ಇರುವ ವಾಚು, ಡಯಲ್‌ನ ಸುತ್ತ ಡೈಮಂಡ್ ಹರಳಿನ ವಾಚು, ಮುತ್ತುಗಳನ್ನು ಒತ್ತೊತ್ತಾಗಿ ಪೋಣಿಸಿದಂತೆ ಕಾಣುವ ವಾಚು, ಅಪ್ಪಟ ಚಿನ್ನದ ಚೈನ್ ಇರುವ ವಾಚು ದುಬಾರಿ ಎನಿಸಿದರೂ ಸಮಾರಂಭಗಳಿಗೆ, ಪಾರ್ಟಿ ವೇರ್‌ಗೆ ಅತ್ಯಂತ ಸೂಕ್ತ ಎನಿಸಿವೆ. ಇಂಥ ವಾಚುಗಳು ಪ್ರೀತಿಪಾತ್ರರಿಗೆ ಉಡುಗೊರೆಯಾಗಿಯೂ ನೀಡಲು ಸೈ ಎನಿಸಿವೆ. ■



ರೇವತಿ ಕಾಂತ್

ವ್ಯಕ್ತಿಯ ಆರೋಗ್ಯ ಡೇಟಾಗಳನ್ನೂ ತೋರಿಸುತ್ತದೆ. ಹೀಗಾಗಿ ಇದು ಆರೋಗ್ಯಕ್ಕೂ ಪೂರಕ ಎನಿಸಿಕೊಂಡಿದೆ. ಅಲ್ಲದೆ ಇದು ಸ್ಮಾರ್ಟರ್ ಹಾಗೂ ಸ್ಟೈಲಿಷ್ ಎನಿಸಿಕೊಂಡಿದೆ. ಮಿಲೇನಿಯಲ್ಸ್ ಮತ್ತು ಜೆನ್ ಇಂದಿನ ಪೀಳಿಗೆಯ ಅತ್ಯಂತ ಜನಪ್ರಿಯ ಬ್ರ್ಯಾಂಡ್ ವಾಚುಗಳು. ಇವುಗಳು ಬರೀ ಧರಿಸಿಕೊಳ್ಳುವುದಕ್ಕಷ್ಟೇ ಅಲ್ಲದೆ ಅನುಭವಿಸಲೂ ಯೋಗ್ಯವಾದಂಥವು.

**● ಟೈಟಾನ್ ರಾಗ ವಾಚ್ ಸಾಕಷ್ಟು ಬೇಡಿಕೆ ಪಡೆದಿದೆ. ವಾಚ್ ಬ್ರ್ಯಾಂಡ್ ಜನಪ್ರಿಯತೆಯ ಹಾದಿ ಹಿಡಿಯುವುದು ಹೇಗೆ?**

ಯಾವುದೇ ವಾಚುಗಳ ಬೆಲೆ ಅದರ ವಿನ್ಯಾಸದ ಮೇಲೆಯೇ ಅವಲಂಬಿತವಾಗಿರುತ್ತದೆ. ಈ ವಿನ್ಯಾಸ ನಿರ್ಮಾಣದ ಹಿಂದೆ ಹಲವಾರು ಚಿಂತನೆಗಳು ಯೋಚನೆಗಳು ಅಡಗಿವೆ. ವಿನ್ಯಾಸಗಾರನ ಕೈಚಳಕ ಬುದ್ಧಿಮತ್ತೆಯೂ ಕೆಲಸ ಮಾಡುತ್ತದೆ. ಉದಾಹರಣೆಗೆ: ಟೈಟಾನ್ ರಾಗ. ಇದೊಂದು ವಿಶಿಷ್ಟವಾದ ವಿನ್ಯಾಸದ ವಾಚು. ಮಾರುಕಟ್ಟೆಗೆ ಬಂದು ಕೆಲದಿನಗಳಲ್ಲೇ ಬಹಳಷ್ಟು ಬೇಡಿಕೆ, ಜನಪ್ರಿಯತೆ ಗಳಿಸಿತು. ಭಾರತೀಯ ಮಹಿಳೆಯ ಮನೋಸ್ಥಿತಿಗೆ ಪ್ರತಿಬಿಂಬದಂತೆ ಇರುವ ಈ 'ರಾಗ' ವಾಚ್ ಇದುವರೆಗಿನ ವಾಚ್ ಮಾರಾಟ, ವಿನ್ಯಾಸ ಹಾಗೂ ಫ್ಯಾಷನ್‌ಗಳಲ್ಲಿ ಮುಂಚೂಣಿಯಲ್ಲಿ ನಿಲ್ಲುವಂತಿದೆ. ಅದೇ ರೀತಿ ಇತರ ವಿನ್ಯಾಸಗಳೂ ಜನಪ್ರಿಯತೆಯ ಹಾದಿಯನ್ನೇ ಹಿಡಿದಿವೆ.

**● ಇಂದು ವಿನ್ಯಾಸಗಾರನ ಮುಂದಿರುವ ಸವಾಲುಗಳೇನು?**

ವಿನ್ಯಾಸ ಕ್ಷೇತ್ರಕ್ಕೆ ಕಾಲಿಡುವುದಕ್ಕೂ ಮುನ್ನ ನಾನು ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದೇನೆ. ಮಾರುಕಟ್ಟೆ ಅಧ್ಯಯನಕಾರ್ತಿಯಾಗಿ ಈ ಕ್ಷೇತ್ರಕ್ಕೆ ಕಾಲಿಟ್ಟೆ. ಅದಾಗಿ ಮಾರುಕಟ್ಟೆ ವಿಭಾಗದ ಸಮನ್ವಯಾಧಿಕಾರಿಯಾಗಿ ಪಶ್ಚಿಮ ಏಷ್ಯಾ ಹಾಗೂ ಆಫ್ರಿಕಾಗಳಲ್ಲಿ ಕೆಲಸ ಮಾಡಿದೆ. ಬಳಿಕ ವಾಚ್ ಡಿಸೈನ್ ವಿಭಾಗದಲ್ಲಿ ಮುಖ್ಯ ವಿನ್ಯಾಸಕಾರ್ತಿಯಾದೆ. ಇದೀಗ ಟೈಟಾನ್ ಕಂಪನಿಯನ್ನು ವಾಚ್ ವಿನ್ಯಾಸದಲ್ಲಿ ಮುಂಚೂಣಿಯಲ್ಲಿದೆ.

ವಿನ್ಯಾಸಗಳ ಬಗ್ಗೆ ಆಲೋಚನಾಕ್ರಿಯೆ ಹಾಗೂ ವಿನ್ಯಾಸ ಮಾಡುವುದು ಎರಡೂ ಈ ಕ್ಷೇತ್ರದ ಪ್ರಮುಖ ಆಯಾಮಗಳು. ಮೊದಲು ಎದುರಾಗುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು. ವಿನ್ಯಾಸಗಳ ಬಗ್ಗೆ ಯೋಚಿಸುವುದು ಕೂಡ ಸಮಸ್ಯೆಗಳಿಗೆ ರಚನಾತ್ಮಕ ಪರಿಹಾರ ನೀಡುತ್ತದೆ. ವಿನ್ಯಾಸ ಮಾಡುವುದು ಮಾತ್ರ ಅತ್ಯಂತ ಸೃಜನಶೀಲತೆಯನ್ನು ಬಯಸುತ್ತದೆ. ಕಲಾತ್ಮಕತೆ, ಕೌಶಲವನ್ನು ಬಯಸುತ್ತದೆ. ಇದು ಸಂವೇದನಾಶೀಲವಾಗಿರಬೇಕು, ಸಮಕಾಲೀನ ಟ್ರೆಂಡ್, ಕಲ್ಪನೆ, ಜೀವನಶೈಲಿ, ಉತ್ತಮ ಆಕಾರ, ವಿನ್ಯಾಸ, ಬಣ್ಣ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ವಿನ್ಯಾಸ ಮಾಡಬೇಕಾಗುತ್ತದೆ.